ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):

ಅ) ರೂ. 17,19,406-00

ಆ) ಇಲ್ಲ

ಇ) ಇಲ್ಲ.

ಶ್ರೀ ರೇಣುಕಾದೇವಿ ದೇವಸ್ಥಾನದ ಆದಾಯ

54 - ಶ್ರೀ ಗೋವಿಂದಪ್ಪ ಹನುಮಂತಪ್ಪ ಜುಟ್ಟಲ್ (ಕುಂದಗೋಳ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶ್ರೀ ರೇಣುಕಾದೇವಿ (ಎಲ್ಲಮ್ಮನಗುಡ್ಡ) ಕ್ಷೇತ್ರದ ದೇವಸ್ಥಾನದಿಂದ ಕಳೆದ ಹತ್ತು ವರ್ಷಗಳಲ್ಲಿ ಬಂದ ಆದಾಯ ಎಷ್ಟು?

ಆ) ಈ ಕ್ಷೇತ್ರದಲ್ಲಿ ಪ್ರವಾಸಿ ಬಂಗಲೆ ಏನಾದರು ಇದೆಯೆ; ಇದ್ದರೆ ಇದರ ಸೌಲಭ್ಯದ ಪ್ರಮಾಣ ಎಷ್ಟು?

ಇ) ಸದರಿ ಕ್ಷೇತ್ರದಲ್ಲಿ ಎಷ್ಟು ಧರ್ಮ ಶಾಲೆಗಳಿವೆ?

ಈ) ಪ್ರವಾಸಿಗರಿಗೆ ಅಲ್ಲಿ ವಸತಿ ಸೌಲಭ್ಯ ವ್ಯವಸ್ಥೆಗಳನ್ನು ಮಾಡಲಾಗಿದೆಯೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):

ಅ) ರೂ. 1,98,83,314-12

ಆ) ಇದೆ, ಆದರೆ ಈ ಇಲಾಖೆಗೆ ಸಂಬಂಧಿಸಿದ್ದಲ್ಲ (ಪ್ರವಾಸೋದ್ಯಮ ಇಲಾಖೆಗೆ ಸಂಬಂಧಿಸಿದ್ದು)

ಇ) ದೇವಸ್ಥಾನಕ್ಕೆ ಸೇರಿದ ಒಂದು ಧರ್ಮ ಶಾಲೆ ಇದೆ.

ಈ) ಹೌದು.

ರಾಜ್ಯದಲ್ಲಿ ಲ್ಯಾಂಡ್ ಟ್ರಿಬ್ಯೂನಲ್‌ಗಳನ್ನು ನೇಮಕ ಮಾಡುವಲ್ಲಿ ವಿಳಂಬ

125 - ಶ್ರೀ ಬಿ. ಎಸ್. ಯಡಿಯೂರಪ್ಪ, (ಶಿಕಾರಿಪುರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಈವರೆಗೆ ಭೂ ನ್ಯಾಯ ಮಂಡಳಿ ಸಮಿತಿಗಳನ್ನು ನೇಮಕ ಮಾಡಲು ವಿಳಂಬವಾಗುತ್ತಿರುವುದಕ್ಕೆ ಕಾರಣವೇನು?

ಆ) ಈ ಸಮಿತಿಗಳನ್ನು ನೇಮಕ ಮಾಡಲು ಸರ್ಕಾರದವರು ತೀರ್ಮಾನ ಕೈಗೊಂಡರುವರೆ?

ಇ) ಹಾಗಿದ್ದಲ್ಲಿ, ತೀರ್ಮಾನದ ದಿನಾಂಕ ಯಾವುದು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):

ಅ) 113 ಭೂ ನ್ಯಾಯ ಮಂಡಳಿಗಳನ್ನು ಈಗಾಗಲೇ ಪುನರ್ ರಚಿಸಲಾಗಿದೆ. ಇನ್ನುಳಿದವುಗಳನ್ನು ಶೀಘ್ರವೇ ಪುನರ್ ರಚಿಸಲಾಗುವುದು.

ಆ) ಹೌದು

ಇ) ದಿನಾಂಕ 25-2-1991.

ಶಿವಮೊಗ್ಗ ಜಿಲ್ಲೆಗೆ ಬರಗಾಲ ಕಾಮಗಾರಿ ಬಗ್ಗೆ ಹಾವತಿ ಮಾಡಬೇಕಾದ ಬಾಕಿ ಹಣ

126 - ಶ್ರೀ ಬಿ. ಎಸ್. ಯಡಿಯೂರಪ್ಪ, (ಶಿಕಾರಿಪುರ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ಜಿಲ್ಲೆಗೆ ಜನವರಿ, ಫೆಬ್ರವರಿ 1991ರಂದು ಬರಗಾಲ ಕಾಮಗಾರಿಗಾಗಿ ಸರ್ಕಾರದವರು ಬಿಡುಗಡೆ ಮಾಡಿದ ಹಣವೆಷ್ಟು?

ಆ) ಶಿವಮೊಗ್ಗ ಜಿಲ್ಲೆಯಲ್ಲಿ ಬರಗಾಲ ಕಾಮಗಾರಿ ಕೆಲಸದ ಬಗ್ಗೆ ಸಂಬಂಧಪಟ್ಟ ಇಲಾಖೆಗೆ ಪಾವತಿ ಮಾಡಬೇಕಾದ ಬಾಕಿ ಹಣವೆಷ್ಟು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):

ಅ) 85.70 ಲಕ್ಷ ರೂ.ಗಳು

ಆ)

ಇಲಾಖೆ	ಲಕ್ಷ ರೂ.ಗಳಲ್ಲಿ
ಲೋಕೋಪಯೋಗಿ	9.49
ಜಿಲ್ಲಾ ಪರಿಷತ್‌ಗೆ	24.74
ಬಿ.ಡಿ.ಓ.	9.77
ಸಣ್ಣ ನೀರಾವರಿ	1.91
ಒಟ್ಟು	45.91

ಮೂಡಿಗೆರೆ ತಾಲ್ಲೂಕಿನಲ್ಲಿ ದರಖಾಸ್ತು ಮಂಜೂರಾತಿ

132 - ಶ್ರೀಮತಿ ಮೋಟಮ್ಮ (ಮೂಡಿಗೆರೆ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೂಡಿಗೆರೆ ತಾಲ್ಲೂಕಿನಲ್ಲಿ ಕಳೆದ ಮೂರು ವರ್ಷಗಳಿಂದ ಹರಿಜನ ಗಿರಿಜನರಿಗೆ ದರಖಾಸ್ತು ಮಂಜೂರು ಮಾಡಿ ಸಾಗವಳಿ ಚೀಟಿ ಕೊಡಲಾದ ಜಮೀನಿನ ಕ್ಷೇತ್ರವೆಷ್ಟು?

ಆ) ಹಾಗಿದ್ದಲ್ಲಿ, ಸದರಿ ದರಖಾಸ್ತು ಜಮೀನಿನ ವಿಸ್ತೀರ್ಣವೆಷ್ಟು, ಜಮೀನನ್ನು ಹರಿಜನ ಗಿರಿಜನರು ಕೃಷಿ ಮಾಡುತ್ತಿರುವುದು ನಿಜವೇ?

ಇ) ಹಾಗಾಗದಿದ್ದಲ್ಲಿ, 1978ರಿಂದ ಇಲ್ಲಿಯ ತನಕ ಹರಿಜನ-ಗಿರಿಜನರಿಗೆ ಕೊಟ್ಟ ದರಖಾಸ್ತು ಮಂಜೂರಾತಿ: ಜಮೀನನ್ನು ಅಕ್ರಮ ಒತ್ತುವರಿ ಮಾಡಿದವರ ಸಂಖ್ಯೆ, ಎಷ್ಟು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):

ಅ) 14.15 ಎಕರೆಗಳು

ಆ) 14.15 ಎಕರೆಗಳು ಮತ್ತು ಈ ಜಮೀನನ್ನು ಹರಿಜನ-ಗಿರಿಜನರು ಸಾಗುವಳಿ ಮಾಡುತ್ತಿರುವರು.

ಇ) 1978ರಿಂದ ಇಲ್ಲಿಯತನಕ 24 ಜನ ಹರಿಜನ-ಗಿರಿಜನರಿಗೆ ಮಂಜೂರಾತಿಯಾದ 84 ಎಕರೆ ಜಮೀನಿನಲ್ಲಿ 15 ಎಕರೆ ಜಮೀನು ಮೂಡಿಗೆರೆ ತಾಲ್ಲೂಕಿನ ಕುಂದೂರು ಗ್ರಾಮದಲ್ಲಿ 4 ಜನರಿಂದ ಅಕ್ರಮ ಒತ್ತುವರಿ ಮಾಡಲಾಗಿದೆ.

ಕಂದಾಯ ಇಲಾಖೆಯಲ್ಲಿರುವ ತಹಶೀಲ್ದಾರರ ಹುದ್ದೆಗಳು

131 - ಶ್ರೀಮತಿ ಮೋಟಮ್ಮ (ಮೂಡಿಗೆರೆ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಕಂದಾಯ ಇಲಾಖೆಗಳಲ್ಲಿರುವ ಒಟ್ಟು ತಹಶೀಲ್ದಾರರ ಹುದ್ದೆಗಳೆಷ್ಟು, ಹಾಗೂ ಶಿರಸ್ತೇದಾರರ ಹುದ್ದೆಗಳೆಷ್ಟು;

ಆ) ಇವರಲ್ಲಿ ಹರಿಜನ ಗಿರಿಜನರೆಷ್ಟು, ತಹಶೀಲ್ದಾರರು, ಶಿರಸ್ತೇದಾರಾಗಿದ್ದಾರೆ;

ಇ) ಈ ಮೇಲಿನ ಹುದ್ದೆಗಳನ್ನು ಭರ್ತಿ ಮಾಡುವಾಗ ಮೀಸಲಾತಿ ನಿಯಮದಂತೆ